ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 765
ಉತ್ತರಿಸುವ ದಿನಾಂಕ : 10.03.2020
ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 5 ವರ್ಷದಲ್ಲಿ ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ (ಎಂ.ಎಂ.ಎಲ್)ಯಿಂದ ಇದುವರೆವಿಗೂ ರಾಜ್ಯದಲ್ಲಿ ಎಷ್ಟು ಕಂಪನಿಗಳಿಗೆ ಗಣಿಗಾರಿಕೆ ಗುತ್ತಿಗೆ ನೀಡಲಾಗಿದೆ; ಯಾವ ಯಾವ ಖನಿಜಗಳನ್ನು ಹೊರತೆಗೆಯಲು ಅನುಮತಿ ನೀಡಲಾಗಿದೆ; (ಈ ಬಗ್ಗೆ ಜಿಲ್ಲಾವಾರು ವಿಸ್ತೀರ್ಣವಾರು ಮತ್ತು ಗುತ್ತಿಗೆ ಅವಧಿ ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)	ಕೆ.ಎಸ್.ಎಂ.ಸಿ.ಎಲ್, ಬೆಂಗಳೂರು, ಈ ಸಂಸ್ಥೆಯು ತನ್ನ ಅಧೀನದಲ್ಲಿರುವ ಗ್ರಾನೈಟ್ ಶಿಲಾ ಗಣಿಗಳಲ್ಲಿ ಶಿಲಾದಿಮ್ಮಿಗಳನ್ನು ಉತ್ಪಾದನೆ ಮಾಡಲು ಇ-ಟೆಂಡರ್ ಮೂಲಕ ಕಳೆದ ಐದು ವರ್ಷಗಳಲ್ಲಿ 01 ಕಂಪನಿಯ ಜೊತೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಗುತ್ತಿಗೆವಾರು / ಜಿಲ್ಲಾವಾರು ವಿವರಗಳನ್ನು **ಅನುಬಂಧ – 1** ರಲ್ಲಿ ನೀಡಲಾಗಿದೆ. ಸಂಸ್ಥೆಯ ಅಧೀನದಲ್ಲಿರುವ ಕಬ್ಬಿಣದ ಅದಿರು ಗಣಿಗಳಲ್ಲಿ ಕಳೆದ 5 ವರ್ಷಗಳಲ್ಲಿ ಇ-ಟೆಂಡರ್ ಮೂಲಕ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಅದಿರನ್ನು ಉತ್ಪಾದಿಸಲಾಗಿದ್ದು, ವಿವರಗಳನ್ನು **ಅನುಬಂಧ – 2** ರಲ್ಲಿ ನೀಡಲಾಗಿದೆ.
ಆ)	ಲೀಸ್ ಪಡೆದ ಕಂಪನಿಗಳು ಇಲ್ಲಿಯವರೆಗೆ, ಎಷ್ಟು ಪ್ರಮಾಣದ ಖನಿಜವನ್ನು ಹೊರತೆಗೆಯಲಾಗಿದೆ; ಹಾಗೂ ಕಳೆದ 5 ವರ್ಷದಿಂದ ಎಂ.ಎಂ.ಎಲ್‌ಗೆ ಎಷ್ಟು ಆದಾಯ ಬಂದಿರುತ್ತದೆ;	ಸಂಸ್ಥೆಯು ತನ್ನ ಅಧೀನದಲ್ಲಿರುವ ಗಣಿ / ಶಿಲಾಗಣಿ ಗುತ್ತಿಗೆಗಳನ್ನು ಲೀಸ್‌ಗೆ ನೀಡಿರುವುದಿಲ್ಲ. ಆದರೆ ಉತ್ಪಾದನೆ ಮಾಡಲು ಶಿಲಾ ಗಣಿಗಳನ್ನು ನೀಡಲಾಗಿದ್ದು, ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ಮಾರ್ಚ್ – 2019 ರ ವರೆಗೆ ಶಿಲಾ ದಿಮ್ಮಿಗಳನ್ನು ಉತ್ಪಾದನೆ ಮಾಡಿರುವ ವಿವರ ಈ ಕೆಳಕಂಡಂತಿದೆ. ಕ್ರಸಂ | ಗಣಿಯ ಹೆಸರು | ಉತ್ಪಾದನೆ 1. | ವಡ್ಡರಹಳ್ಳಿ | 791 ಘನ ಮೀಟರ್ | ಒಟ್ಟು | 791 ಘನ ಮೀಟರ್ ಕಳೆದ 5 ವರ್ಷಗಳಲ್ಲಿ (ಮಾರ್ಚ್ – 2019 ರವರೆಗೆ) ಗುತ್ತಿಗೆದಾರರಿಂದ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಉತ್ಪಾದನೆ ಮಾಡಲಾದ ಕಬ್ಬಿಣದ ಅದಿರಿನ ವಿವರ ಈ ಕೆಳಕಂಡಂತಿದೆ. ಕ್ರಸಂ | ಗಣಿಯ ಹೆಸರು | ಅದಿರುಉತ್ಪಾದನೆ (ಮೆ. ಟನ್‌ಗಳಲ್ಲಿ) 1. | ತಿಮ್ಮಪ್ಪನಗುಡಿ | 3734623 2. | ಸುಬ್ಬರಾಯನಹಳ್ಳಿ | 8943938 | ಒಟ್ಟು | 12678561

<table>
<tr><td></td><td></td><td>ಕಳೆದ 05 ವರ್ಷಗಳಲ್ಲಿ ಸಂಸ್ಥೆಯು ಒಟ್ಟಾರೆ ಗಳಿಸಿದ ನಿವ್ವಳ ಆದಾಯದ ವಿವರ ಕೆಳಕಂಡಂತಿದೆ.
(ತೆರಿಗೆ ನಂತರ, ರೂ. ಕೋಟಿಗಳಲ್ಲಿ)<table><tr><td>2014–</td><td>2015–</td><td>2016–</td><td>2017–18</td><td>2018–19</td></tr><tr><td>280.88</td><td>245.46</td><td>316.13</td><td>306.24</td><td>19.82</td></tr></table></td></tr>
<tr><td>ಇ)</td><td>ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮದ ವತಿಯಿಂದ ಎಷ್ಟು ಸಂಸ್ಥೆಗಳಿಗೆ ಗುತ್ತಿಗೆಯನ್ನು ಬಿಟ್ಟುಕೊಡಲಾಗಿದೆ; ಮತ್ತು ಗುತ್ತಿಗೆಯನ್ನು ವರ್ಗಾಯಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರದ ಆದೇಶಗಳನ್ವಯ ವರ್ಗಾಹಿಸಲಾದ ಗುತ್ತಿಗೆಗಳ ವಿವರವನ್ನು ಅನುಬಂಧ – 3 ರಲ್ಲಿ ಲಗತ್ತಿಸಿದೆ. ಕೆಳಕಂಡಂತಿದೆ.
1) 03 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶಗಳನ್ನು ಮೆ॥ ಕಾನೋರಿಯಾ ಇಂಡಸ್ಟ್ರೀಸ್ ರವರಿಗೆ 1995 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ.
2) 01 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶವನ್ನು ಮೆ॥ ಮದ್ರಾಸ್ ಸಿಮೆಂಟ್ ರವರಿಗೆ 2005 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ.
3) 02 ಸುಣ್ಣದಕಲ್ಲಿನ ಗಣಿಗುತ್ತಿಗೆ ಪ್ರದೇಶಗಳನ್ನು ಮೆ॥ ಜೆ.ಕೆ.ಸಿಮೆಂಟ್ ರವರಿಗೆ 2002 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ. ಮತ್ತು 05 ಕಬ್ಬಿಣ ಅದಿರು ಗಣಿಗುತ್ತಿಗೆ ಪ್ರದೇಶಗಳನ್ನು ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿ., ರವರಿಗೆ 1985 ನೇ ಇಸವಿಯಲ್ಲಿ ವರ್ಗಾಯಿಸಲಾಗಿದೆ ವಿವರ **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.</td></tr>
</table>

ಸಂಖ್ಯೆ: ಸಿಐ 12 ಎಂಪಿಪಿ 2020

(ಸಿ.ಸಿ ಪಾಟೀಲ್)
ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರು.

ಅನುಬಂಧ -1

ಸಂಸ್ಥೆಯು ತನ್ನ ಅಧೀನದಲ್ಲಿರುವ ಗ್ರಾನೈಟ್ ಶಿಲಾ ಗಣಿಗಳಲ್ಲಿ ಶಿಲಾದಿಮ್ಮಿಗಳನ್ನು ಉತ್ಪಾದನೆ ಮಾಡಲು ಇ-ಟೆಂಡರ್ ಮೂಲಕ ಕಳೆದ ಐದು ವರ್ಷಗಳಲ್ಲಿ 01 ಕಂಪನಿಯ ಜೊತೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಗುತ್ತಿಗೆವಾರು / ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ಗಣಿಯ ಹೆಸರು	ಜಿಲ್ಲೆ	ವಿಸ್ತೀರ್ಣ (ಎಕರೆಗಳಲ್ಲಿ)	ಗುತ್ತಿಗೆದಾರರ ಹೆಸರು	ಅವಧಿ
1..	ವಡ್ಡರಹಳ್ಳಿ	ಹಾಸನ	13.25	ಪ್ರಥಮ್ ಗ್ರಾನೈಟ್ಸ್	14.02.2017 ರಿಂದ 3 ವರ್ಷಗಳಿದ್ದು, ಒಂದು ವರ್ಷದ ನಂತರ ಕರಾರನ್ನು ರದ್ದುಗೊಳಿಸಲಾಗಿದೆ.

ಉಪ ಪ್ರಧಾನ ವ್ಯವಸ್ಥಾಪಕರು (ಉತ್ಪಾದನೆ)

ಅನುಬಂಧ -2

ಸಂಸ್ಥೆಯ ಅಧೀನದಲ್ಲಿರುವ ಕಬ್ಬಿಣದ ಅದಿರು ಗಣಿಗಳಲ್ಲಿ ಕಳೆದ 5 ವರ್ಷಗಳಲ್ಲಿ ಇ-ಟೆಂಡರ್ ಮೂಲಕ ಯಂತ್ರೋಪಕರಣಗಳನ್ನು ಬಾಡಿಗೆ ಆದಾರದ ಮೇಲೆ ಪಡೆದು ಅದಿರನ್ನು ಉತ್ಪಾದಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಗಣಿಯ ಹೆಸರು	ಜಿಲ್ಲೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಆರ್.ಓ.ಎಂ. ಅದಿರು ಉತ್ಪಾದನೆಗಾಗಿ ಯಂತ್ರೋಪಕರಣಗಳನ್ನು ನೀಡಿರುವ ಗುತ್ತಿಗೆದಾರರ ಹೆಸರು	ಕರಾರು ಅವಧಿ	ಅದಿರು ಸಂಸ್ಕರಣೆಗಾಗಿ ಯಂತ್ರೋಪಕರಣಗಳನ್ನು ನೀಡಿರುವ ಗುತ್ತಿಗೆದಾರರ ಹೆಸರು	ಕರಾರಿನ ಅವಧಿ
1	ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿ	ಬಳ್ಳಾರಿ	136.14	1) ಮೆ:ಸೌತ್ ವೆಸ್ಟ್ ಮೈನಿಂಗ್ ಲಿ.,	26.11.2014 ರಿಂದ 31.03.2017	ವಿಶಾಲ್ ಎಂಟರ್ ಪ್ರೈಸಸ್	26.11.2014 ರಿಂದ 31.03.2017
				2) ಪ್ರವೀಣ್ ಪ್ರಾಜೆಕ್ಟ್	22.05.2017 ರಿಂದ 15.12.2018	ವಿಶಾಲ್ ಎಂಟರ್ ಪ್ರೈಸಸ್	01.04.2017 ರಿಂದ 31.03.2020
				3)ಅಮಿತ್ ಅರ್ಥ್ ಮೂವರ್ಸ್,	14.08.2018 ರಿಂದ 31.03.2019	ವಿಶಾಲ್ ಎಂಟರ್ ಪ್ರೈಸಸ್	01.04.2017 ರಿಂದ 31.03.2020
2	ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿ	ಬಳ್ಳಾರಿ	80.06	1) ಎಸ್.ಎಸ್.ಮುಚಂಡಿ,	26.11.2014 ರಿಂದ 31.03.2017	ವಿಶಾಲ್ ಎಂಟರ್ ಪ್ರೈಸಸ್	26.11.2014 ರಿಂದ 31.03.2017
				2)ಕೆ.ಬಿ.ಎನ್.ಎಂಟರ್ ಪ್ರೈಸಸ್	22.05.2017 ರಿಂದ 31.03.2020	ವಿಶಾಲ್ ಎಂಟರ್ ಪ್ರೈಸಸ್	22.05.2017 ರಿಂದ 31.03.2020

ಉಪ ಪ್ರಧಾನ ವ್ಯವಸ್ಥಾಪಕರು (ಉತ್ಪಾದನೆ)

ಅನುಬಂಧ - ೩

ಕರ್ನಾಟಕ ಸರ್ಕಾರದ ಆದೇಶದಂತೆ ಈ ಕೆಳಕಾಣಿಸಿದ ಗುತ್ತಿಗೆ ಪ್ರದೇಶಗಳನ್ನು ವರ್ಗಾವಣೆ ಮಾಡಲಾಗಿರುತ್ತದೆ.

ಕ್ರಮ ಸಂಖ್ಯೆ	ಖನಿಜ,	ವರ್ಗಾವಣೆಗೊಂಡ ಗುತ್ತಿಗೆ ವಿಸ್ತೀರ್ಣ	ವರ್ಗಾವಣೆ ಪಡೆದ ಸಂಸ್ಥೆ	ವರ್ಗಾವಣೆ ಗೊಂಡ ವರ್ಷ
1.	ಸುಣ್ಣದ ಕಲ್ಲು	ಕಲಾದಗಿ ಗಣಿ ಗುತ್ತಿಗೆ ಸಂಖ್ಯೆ: 1733 ರ ವಿಸ್ತೀರ್ಣ 1200 ಎಕರೆ	ಮೆ॥ ಕಾಸೋರಿಯಾ ಇಂಡಸ್ಟ್ರೀಸ್	1996
2.	ಸುಣ್ಣದ ಕಲ್ಲು	ಜಾಲಿಕಟ್ಟೆ ಗಣಿ ಗುತ್ತಿಗೆ ಸಂಖ್ಯೆ: 1685 ರ ವಿಸ್ತೀರ್ಣ 1200 ಎಕರೆ	ಮೆ॥ ಕಾಸೋರಿಯಾ ಇಂಡಸ್ಟ್ರೀಸ್	1996
3.	ಸುಣ್ಣದ ಕಲ್ಲು	ಕಜ್ಜಿದೋಣಿ ಗಣಿ ಗುತ್ತಿಗೆ ಸಂಖ್ಯೆ: 1683 ರ ವಿಸ್ತೀರ್ಣ 560 ಎಕರೆ	ಮೆ॥ ಕಾಸೋರಿಯಾ ಇಂಡಸ್ಟ್ರೀಸ್	1996
4.	ಸುಣ್ಣದ ಕಲ್ಲು	ಮತ್ತೋಡ್ ಗಣಿ ಗುತ್ತಿಗೆ ಸಂಖ್ಯೆ: 1742 ರ ವಿಸ್ತೀರ್ಣ 111.30 ಹೆಕ್ಟೇರ್	ಮೆ॥ ಮದ್ರಾಸ್ ಸಿಮೆಂಟ್	2002
5.	ಸುಣ್ಣದ ಕಲ್ಲು	ಹಲ್ಕಿಸಿಂಗಾಪುರ ಗಣಿ ಗುತ್ತಿಗೆ ಸಂಖ್ಯೆ: 2344 ರ ವಿಸ್ತೀರ್ಣ 307 ಎಕರೆ	ಮೆ॥ ಜೆ.ಕೆ. ಸಿಮೆಂಟ್	2002
6.	ಸುಣ್ಣದ ಕಲ್ಲು	ಮುದ್ದಾಪುರ ಗಣಿ ಗುತ್ತಿಗೆ ಸಂಖ್ಯೆ: 2343 ರ ವಿಸ್ತೀರ್ಣ 400 ಎಕರೆ	ಮೆ॥ ಜೆ.ಕೆ. ಸಿಮೆಂಟ್	2002
7.	ಕಬ್ಬಿಣ ಅದಿರು ಗಣಿ	ಅಪ್ಪೇನಹಳ್ಳಿ ಗಣಿ ಗುತ್ತಿಗೆ ಸಂಖ್ಯೆ: 987 ರ ವಿಸ್ತೀರ್ಣ 539.93 ಎಕರೆ	ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ.	1985
8.	ಕಬ್ಬಿಣ ಅದಿರು ಗಣಿ	ದೋಣಿಮಲೈ ಗಣಿ ಗುತ್ತಿಗೆ ಸಂಖ್ಯೆ: 1646 ರ ವಿಸ್ತೀರ್ಣ 1800 ಎಕರೆ	ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ.	1985
9.	ಕಬ್ಬಿಣ ಅದಿರು ಗಣಿ	ದೋಣಿಮಲೈ ಗಣಿ ಗುತ್ತಿಗೆ ಸಂಖ್ಯೆ: 1703 ರ ವಿಸ್ತೀರ್ಣ 200 ಎಕರೆ	ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ.	1985
10.	ಕಬ್ಬಿಣ ಅದಿರು ಗಣಿ	ಉಬ್ಬಲಗುಂಡಿ ಗಣಿ ಗುತ್ತಿಗೆ ಸಂಖ್ಯೆ: 899 ರ ವಿಸ್ತೀರ್ಣ 170 ಎಕರೆ	ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ.	1985
11.	ಕಬ್ಬಿಣ ಅದಿರು ಗಣಿ	ಸಂಡೂರ್ ಫಾರೆಸ್ಟ್ ಗಣಿ ಗುತ್ತಿಗೆ ಸಂಖ್ಯೆ: 475 ರ ವಿಸ್ತೀರ್ಣ 200 ಎಕರೆ	ಜಂಟಿ ಸಹಭಾಗಿತ್ವ ಸಂಸ್ಥೆಯಾದ ಮೆ॥ ತುಂಗಾಭದ್ರ ಮಿನರಲ್ಸ್ ಲಿಮಿಟೆಡ್ ಗೆ ವರ್ಗಾಯಿಸಿರುತ್ತದೆ.	1985

Manager (L&E)
Karnataka State Minerals Corporation Limited